ಹಾಗೆ ನೋಡಿದರೆ ಕೆಲವು ಸಮುದಾಯಗಳಲ್ಲಿ ಹೆಣ್ಣುಮಕ್ಕಳು ಮುಟ್ಟಾದಾಗ ಮನೆಯಲ್ಲಿ ಬೇರೆ ಹೆಂಗಸರು ಇಲ್ಲದಿದ್ದ ಪಕ್ಷದಲ್ಲಿ ಗಂಡಸರೇ ಅಡುಗೆಮನೆ ವಹಿಸಿಕೊಳ್ಳುತ್ತಾರೆ. ಇದು ಒಂದು ರೀತಿಯಲ್ಲಿ ಹೆಣ್ಣುಮಕ್ಕಳಿಗೆ 'ರಿಲೀಫ್' ಅನ್ನಿಸಿದರೂ ಮತ್ತೆ ಅವರು ಅಡುಗೆಮನೆ ಪ್ರವೇಶ ಮಾಡುವ ದಿನ ಯುದ್ಧವನ್ನು ಎದುರಿಸುವಷ್ಟು ಆತಂಕದಲ್ಲಿ ಇರಬಹುದು ಎನ್ನುವುದು ಕೂಡ ಸುಳ್ಳಲ್ಲ. ಇಟ್ಟ ಜಾಗದಲ್ಲಿ ಡಬ್ಬಿಗಳು ಸಿಗದೇ ಹೋಗುವುದು, ಪ್ಲಾನ್ ಮಾಡಿಕೊಂಡ ಅಡುಗೆ ಸಾಮಗ್ರಿಗಳು ಇಲ್ಲದೆ ಅಥವಾ ಸಮಯಕ್ಕೆ ಸರಿಯಾಗಿ ಸಿಗದೆ ಕೆಲಸ ಕೈಗೂಡದೆ ಕಿರಿಕಿರಿ ಆಗುವುದು ಇವೆಲ್ಲಾ ಆಗಿರುವ ಸಂದರ್ಭಗಳೂ ಇವೆ.

ಒಂದು ದಿನ ಅಡುಗೆಮನೆ ಒಳಗೆ ಬಂದು ಚಂದಕ್ಕೆ ಅಡುಗೆ ಮಾಡಿ ತಮ್ಮ ವೈಭೋಗದ ಅಡುಗೆಯನ್ನು ತಾವೇ ಸುಖಿಸುತ್ತಾ ಅತ್ತಿತ್ತ ನೋಡಿ ಎಲ್ಲರಿಂದ ಭೇಷ್ ಅನ್ನಿಸಿಕೊಳ್ಳಲು ಇಷ್ಟಿಷ್ಟೇ ಕಿರುನಗೆ ಬೀರುತ್ತಾ ನಾಳೆಯಿಂದ ಮತ್ತೆ ದಿನಸಿ ಪಟ್ಟಿ ಸಿಕ್ಕರೆ ಬರೀ ತಂದು ಹಾಕುವ ಕೆಲಸ ಮಾಡುವ ಗಂಡಸರ ಅಡುಗೆ ಅಧ್ಯಾತ್ಮ ಮೆಚ್ಚುವಂಥದ್ದೇ!

"ನಾನು ಅಡುಗೆ ಮಾಡ್ತೀನಿ ಅಂದರೂ ಇವಳು ನನ್ನನ್ನ ಅಡುಗೆಮನೆ ಒಳಗೆ ಸೇರಿಸಿಕೊಳ್ಳುವುದೇ ಇಲ್ಲ" ಎನ್ನುವ ಗಂಡಸರಿಗೆ ಪಾಪದ ಹೆಂಗಸರ ಸವಾಲುಗಳು ಅರ್ಥವಾಗುವುದಿಲ್ಲ.

"ಯಾವತ್ತೋ ಒಂದು ದಿನ ಒಳಗೆ ಬಂದು ಚಂದಕ್ಕೆ ಕೊತ್ತಂಬರಿ ಸೊಪ್ಪಿನ ಅಲಂಕಾರ ಮಾಡಿ ಅಡುಗೆ ಮಾಡಿಬಿಟ್ಟರೆ ಏನು ಬಂತು? ಮತ್ತೆ ದಿನಾ ನಾನೇ ಈ ಮುಸುರೆ ಪಾತ್ರೆಗಳ ರಾಶಿಯಲ್ಲಿ, ಮಿಕ್ಸಿಯ ಜೊತೆ, ಉರಿವ ಬೆಂಕಿಯ ಮುಂದೆ ಏಗಬೇಕು" ಅಂತ ಹೆಣ್ಣುಮಕ್ಕಳು ಉತ್ತರ ಕೊಡುತ್ತಾರೆ.

ಯಾಕೆಂದರೆ ನಾಲ್ಕು ದಿನ ಅಡುಗೆ ಮಾಡಬಹುದು. ಆದರೆ, ದಿನಾಲೂ ದಿನಸಿ/ತರಕಾರಿ ಟ್ರಾಕ್ ಮಾಡುವ ಕೆಲಸ ಇದೆಯಲ್ಲ ಅದು ಯಾವ ಫ್ಯಾಕ್ಟರಿ ಇನ್ವೆಂಟರಿಗೂ ಕಡಿಮೆ ಅಲ್ಲ. ಯಾವುದು ನಿನ್ನೆ ಮಾಡಿದ್ದು, ಯಾವುದು ನಾಳೆ ಮಾಡಬೇಕು, ಮುಂದಿನ ವಾರಕ್ಕೆ ಏನೇನು ಪದಾರ್ಥ ಕಡಿಮೆ ಇದೆ... ಏನೇನು ತಂದಿಟ್ಟುಕೋಬೇಕು, ಯಾವ ಅಂಗಡಿಯಲ್ಲಿ ಏನೇನು ಚೆನ್ನಾಗಿ ಸಿಗುತ್ತೆ ಇವೆಲ್ಲ ತಲೆಯನ್ನು ಮೊಸರು ಗಡಿಗೆ ಆಗಿಸುವ ವಿಚಾರಗಳು. "ನನ್ನ ಗಂಡ ಅಡುಗೆ ಮಾಡೋಕೆ ನಿಂತರೆ ಮಸಾಲೆಪುಡಿಯ ಹೊಸಾ ಪ್ಯಾಕೆಟ್ಟನ್ನೇ ಓಪನ್ ಮಾಡೋದು... ಹಳೇದು ರುಚಿ ಬರಲ್ಲ ಅಂತ... ಒಂದೇ ದಿನದ್ ಸಂಭ್ರಮ ಕಣೆ. ಆಮೇಲೆ ನಾವೇ ಹಳತನ್ನೂ ಹೊಸತನ್ನೂ ಹೇಗೆ ಬಳಸೋದು ಅಂತ ಪ್ಲಾನ್ ಮಾಡಿ ಸಾಯ್ಬೇಕು!" ಅಂತ ಸ್ನೇಹಿತೆ ಒಬ್ಬಳು ಹೇಳುತ್ತಿದ್ದಳು.

ಇನ್ನು ಅಡುಗೆಮನೆಗೆ ಪ್ರವೇಶವೇ ಮಾಡದೆ ಸುಮ್ಮನೆ ಕಾಮೆಂಟು ಮಾಡುವ ಧುರಂಧುರರ ಬಗ್ಗೆ ಹೇಳುವುದೇ ಬೇಡ ಬಿಡಿ.

"ಬೇಕಾರೆ ಕೇಳವ... ನಾನೆಂದಾರಾ ಕಂಪ್ಲೇಂಟು ಏಳೀನಾ ಅಂತ? ಅಕಿ ಏನ್ ಮಾಡಿ ಹಾಕತಳೋ ಅದನ್ನ ತಿಂದು ಬಾಯಿ ಮುಚ್ಚಿಗ್ಯಂದು ಎದ್ದೋಗ್ತನಿ..." ಅಂತ ನನ್ನ ಚಿಕ್ಕಪ್ಪ ಒಬ್ಬರು ತಮ್ಮ 'ಹೆಂಡತಿಯ ಗಂಡ' ಎಂಥಾ ಸುಗುಣಶೀಲ ಅಂತ ಹೇಳಿಕೊಳ್ತಾ ಇದ್ದರು.

ಅವರ ಹೆಂಡತಿ ಸ್ವಭಾವದಲ್ಲಿ ಗಟ್ಟಿಗಿತ್ತಿ. ಅಡುಗೆ ಮಾಡುವುದರಲ್ಲೂ ಎತ್ತಿದ ಕೈ. ರೊಟ್ಟಿ ಬಡಿಯಲು ಕೂತರೆ ಒಂದೊಂದು ರೊಟ್ಟಿಯೂ ಹರಿವಾಣದಗಲ ಮೂಡುತ್ತಿದ್ದವು! ದಿಢೀರ್ ಅಂತ ಇಪ್ಪತ್ತು ಜನ ಊಟಕ್ಕೆ ಬಂದರೂ ಹೆದರುವವರಲ್ಲ ಅವರು. ಅವರ ಅಪ್ಪನ ಮನೆಯಲ್ಲಿ ಭಾರೀ ಕೂಡು ಕುಟುಂಬ. ಒಂದು ಹೊತ್ತಿನ ಊಟಕ್ಕೆ ಮನೆಯವರೇ ನೂರಾ ಆರು (ಹೌದು, ನೂರಾರು ಅಲ್ಲ, ಖರೇ ಖರೇ ನೂರಾ ಆರು ಜನ ಜೊತೆಗೆ ಮನೆಗೆ ಬರುವವರು ಇತ್ಯಾದಿ) ಜನಕ್ಕೂ ಮಿಕ್ಕಿ ಇರುತ್ತಿದ್ದರು ಎನ್ನುವುದನ್ನು ಕಂಡಿದ್ದೇವೆ. ಚಿಕ್ಕಮ್ಮ ಈಗಲೂ ಅದ್ಭುತವಾಗಿ ದೇಸಿ ಅಡುಗೆ ಮಾಡುತ್ತಾರೆ. ತಟ್ಟೆಗೆ ಬಿಸಿ ರೊಟ್ಟಿ ಅವರೇಕಾಳು ಪಲ್ಯ, ಅದರ ಮೇಲೆ ಗುಡ್ಡದ ಹಾಗೆ ಕೂತು ಚಿಳ್